ಮಾತನಾಡಿದರೆ ಅತ್ಯಂತ ಪ್ರಬುದ್ಧತೆಯಿಂದ ಎಲ್ಲ ಸನ್ಮಾನ್ಯ ಸದಸ್ಯರು ನಡೆದುಕೊಂಡು, ಈ ಸದನದ ಗೌರವವನ್ನು ಹೆಚ್ಚಿಸಿದ್ದೀರಿ. ನಿಮೆಗೆಲ್ಲರಿಗೂ ಕೂಡ ನಾನು ಋಣಿಯಾಗಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು, ಚರ್ಚೆ ಪ್ರಾರಂಭ ಮಾಡಿದಂಥವರು ; ಬಹಳ ಜವಾಬ್ದಾರಿಯಿಂದ ಅತ್ಯಂತ ಪ್ರಾಮಾಣಿಕವಾಗಿ, ಅವರು ಹುಟ್ಟಿ ಬೆಳೆದು ಬಂದ ಹಿನ್ನೆಲೆಯನ್ನೂ ಮನಸ್ಸಿನಲ್ಲಿಟ್ಟುಕೊಂಡು, ತಾವು ಇವತ್ತು ಇರತಕ್ಕ ಸ್ಥಾನ ಜವಾಬ್ದಾರಿಯನ್ನೂ ಅರಿತುಕೊಂಡು ಘರ್ಷಣೆಗೆ ಅವಕಾಶ ಕೊಡದೇ ಪರಿಣಾಮಕಾರಿಯಾದ ರೀತಿಯಲ್ಲಿ ತಮ್ಮ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಈಶ್ವರಪ್ಪನವರು ತಮ್ಮ ಅಂತರಾಳದಿಂದ ಇವತ್ತು ಮಾತನಾಡಿದರು. ಈ ಸಮಾಜದಲ್ಲಿರತಕ್ಕ ಕೊಳಕಿನ ಬಗ್ಗೆ ಮಾತನಾಡಿದರು. ಅವರೊಬ್ಬ ರಾಜಕಾರಣಿ ಎಂದು ಮಾತನಾಡಲೇ ಇಲ್ಲ. ನನಗೆ ಇದು ಹೆಮ್ಮೆ ಎನಿಸುತ್ತದೆ. ಎಲ್ಲೋ ಒಂದು ಕಡೆಗೆ ಮನುಷ್ಯ ಆ ರೀತಿ ಹೊರಗೆ ಬರಬೇಕು. ಅದೇ ನಿಜವಾದ ವ್ಯಕ್ತಿತ್ವ, ಅನೇಕ ಸಂದರ್ಭಗಳಲ್ಲಿ ನಾವು ರಾಜಕಾರಣದ ಬಗ್ಗೆ ಮಾತನಾಡುವುದು ಬೇರೆ. ನನಗೆ ಬಹಳ ಸಂತೋಷವಾಯಿತು. ರಾಜೇಂದ್ರರವರು ಚಿಕ್ಕವಯಸ್ಸು, ಅವರು ಮಾತನಾಡತಕ್ಕ ಸನ್ನಿವೇಶದಲ್ಲಿ ಯಾರನ್ನೂ ಗಾಯಪಡಿಸಬೇಕೆಂದು ಮಾತನಾಡಲಿಲ್ಲ. ಮಾನ್ಯಮುಖ್ಯಮಂತ್ರಿಗಳು ಮಾರ್ಮಿಕವಾಗಿ ಒಂದು ಮಾತನ್ನು ಹೇಳಿದರು. ಶಸ್ತ್ರಚಿಕಿತ್ಸೆ ಆಗಬೇಕಾಗಿದೆ, ಒಂದು ಚೂರ ರಕ್ತ ಬರುತ್ತೆ. ರಕ್ತ ಎಷ್ಟು ಹೋಗಬೇಕೆಂದರೆ ಯಾವ ರೋಗಿಯ ಚಿಕಿತ್ಸೆ ಆಗಬೇಕೋ ಅವನು ಸಾಯಬಾರದು. ಶಸ್ತ್ರಚಿಕಿತ್ಸೆಗೆ ಸ್ವಲ್ಪ ರಕ್ತ ಸುರಿಯತಕ್ಕಂತಾದ್ದು ಆಗತ್ಯವಿದೆ ಎಂದು ದೇಳಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಎರಡೇ ದಿವಸದೊಳಗೆ ನಾನೇ ಮುತುವರ್ಜಿ ವಹಿಸಿ, ತಮ್ಮೆಲ್ಲರನ್ನೂ ಕರೆಸಿ, ಕುಳಿತುಕೊಂಡು ಒಂದು ಆಶಾಭಾವನೆಯಿಂದ, ಸದುದ್ದೇಶದಿಂದ ಇತ್ಯರ್ಥಗೊಳಿಸತಕ್ಕ ಪ್ರಯತ್ನವನ್ನು ಮಾಡೋಣವೆಂದು ನನ್ನ ಅನಿಸಿಕೆ ಈ ವಿಚಾರವನ್ನು ಇಷ್ಟೊಂದು ಗೌರವಯುತವಾಗಿ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಸಹಕರಿಸಿದ, ಇನ್ನೂ ಮಾತನಾಡತಕ್ಕ ಅನೇಕ ಜನ ಹಿರಿಯ ಸದಸ್ಯರಿದ್ದರು. ಅವರೆಲ್ಲರೂ ತಮ್ಮ ಭಾವನೆಗಳನ್ನು, ತಮ್ಮಲ್ಲಿಯೇ ಇಟ್ಟುಕೊಂಡು ನನ್ನ ಜೊತೆ ಸಹಕರಿಸಿದ್ದಕ್ಕೆ ಮತ್ತೊಮ್ಮೆ ತಮ್ಮೆಲ್ಲರಿಗೂ ನಾನು ವಂದಿಸುತ್ತಿದ್ದೇವೆ. ಈ ವಿಚಾರವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಈಗ ನಾವು ಪ್ರಶ್ನೋತ್ತರ ತೆಗೆದುಕೊಳ್ಳೋಣ.

4. **ಪ್ರಶ್ನೋತ್ತರಗಳು**

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಆನೇಕಲ್ ತಾಲ್ಲೂಕು ಬೆಳ್ಳಂದೂರು ಏತ ನೀರಾವರಿ ಕಾಮಗಾರಿಗಳು

133(1060) ಶ್ರೀ. ಎ.ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆನೇಕಲ್ ತಾಲ್ಲೂಕು ಬೆಳ್ಳಂದೂರು ಏತ ನೀರಾವರಿ ಕಾಮಗಾರಿಗಳು ನೆನಗುದಿಗೆ ಬಿದ್ದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ ; ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು, ಯಾವಾಗ ಕೈಗೊಳ್ಳಲಾಗುವುದು.

ಆ) ಮಾದಪ್ಪನಹಳ್ಳಿ ಏತನೀರಾವರಿ ಯೋಜನೆಗೆ 1/3 ಭಾಗ ಹಣವಿದ್ದರೂ ಈ ಯೋಜನೆ ಅನುಷ್ಠಾನಗೊಳಿಸದಿರಲು ಕಾರಣವೇನು?

ಇ) ಆನೇಕಲ್ ತಾಲ್ಲೂಕು ದೊಡ್ಡಹಳ್ಳಿ ಅಥವಾ ಬೊಮ್ಮಂಡಹಳ್ಳಿ ಕೆರೆಯ ನೀರನ್ನು ಏತನೀರಾವರಿ ಮೂಲಕ ಸರಬರಾಜು ಮಾಡುವುದರಿಂದ 2000 ಎಕರೆ ಜಮೀನು ನೀರಾವರಿಯಾಗುವುದೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ.

ಈ) ಹಾಗಿದ್ದಲ್ಲಿ ಈ ಮೇಲಿನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರದವರು ಅಗತ್ಯ ಕ್ರಮ ಕೈಗೊಳ್ಳುವರೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು.) :

ಅ)ಈ ಕಾಮಗಾರಿಯ ವಿನ್ಯಾಸ ಮತ್ತು ಅಂದಾಜು ವಿಧ ಹಂತದಲ್ಲಿದ್ದು ಕಾಮಗಾರಿಗೆ ಬೇಕಾದ ಅನುದಾನವನ್ನು ಲಭ್ಯ ಮಾಡಿದ್ದು ತಾಂತ್ರಿಕ ಮಂಜೂರಾತಿ ಆದ ನಂತರ ತೀವ್ರಗತಿಯಲ್ಲಿ ಕೆಲಸ ಕೈಗೊಳ್ಳಲು ಸೂಚಿಸಲಾಗಿದೆ.

ಆ) ಮಾದಪ್ಪನಹಳ್ಳಿ ಏತ ನೀರಾವರಿ ಯೋಜನೆ ಯಿಂದ ಜಂತಗೊಂಡನಹಳ್ಳಿ ಕೆರೆ ಮತ್ತು ಇತರ ಕೆರೆಗಳಿಗೆ ನೀರೊದಗಿಸುವ ಯೋಜನೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯಿಂದ ಮಂಜೂರಾಗಿದ್ದು ಕೆಲಸ ಪ್ರಾರಂಭಿಸಲು ಆದೇಶಿಸಿದೆ .

ಇ) ಆನೇಕಲ್ ತಾಲ್ಲೂಕು ದೊಡ್ಡಹಳ್ಳಿ ಅಥವಾ ಬೊಮ್ಮನಹಳ್ಳಿ ಕೆರೆಯ ನೀರನ್ನು ಏತ ನೀರಾವರಿ ಮೂಲಕ ಸರಬರಾಜು ಮಾಡುವುದರಿಂದ 2000 ಎಕರೆ ಜಮೀನು ನೀರಾವರಿಯಾಗುವುದೆಂಬ ವಿಷಯ ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದಿಲ್ಲ.

ಈ) ಈ ಬಗ್ಗೆ (ಅ)ಮತ್ತು (ಆ) ಯೋಜನೆಗಳನ್ನು ಅನುಷ್ಠಾನಗೊಳಿಸಲು ಆದೇಶಿಸಿದ್ದು (ಇ) ಪ್ರಸ್ತಾವನೆ ಯೋಜನೆಯನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಹೆಚ್.ಡಿ.ಬಸವರಾಜ್ (ಶ್ರೀ ಎ.ನಾರಾಯಣಸ್ವಾಮಿ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಆನೇಕಲ್ ತಾಲ್ಲೂಕು, ಬೆಳ್ಳಂದೂರು ಏತ ನೀರಾವರಿ ಕಾಮಗಾರಿಗೆ ಎಷ್ಟು ಹಣವನ್ನು ವೆಚ್ಚ ಮಾಡಿದ್ದಾರೆ ಎಂಬ ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಹಾಗೆಯೇ ಇಷ್ಟೊಂದು ಹಣವನ್ನು ವೆಚ್ಚ ಮಾಡಿದ್ದಾರಲ್ಲ, ಇದರ ಪ್ರಯೋಜನ ಯಾವ ರೀತಿ ಆಗಿದೆ ಎನ್ನುವುದನ್ನು ಈ ಸದನದ ಮೂಲಕ ಜನತೆಗೆ ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಈ ಬೆಳ್ಳಂದೂರು ಏತ ನೀರಾವರಿ ಯೋಜನೆ ಇನ್ನೂ ಪ್ರಾರಂಭ ಮಾಡಿಲ್ಲ. ಅದಕ್ಕೆ ಇನ್ನೂ ಟೆಕ್ನಿಕಲ್ ಮಂಜೂರಾತಿ ನನಗೆ ಸಿಗದೇ ಇರುವುದರಿಂದ ಈ ಕಾಮಗಾರಿಯನ್ನು ಪ್ರಾರಂಭ ಮಾಡಿಲ್ಲವೆಂದು ತಮ್ಮ ಮೂಲಕ ಸನ್ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ .

ಶ್ರೀ ಹೆಚ್.ಡಿ. ಬಸವರಾಜ್ : ಮಾದಪ್ಪನಹಳ್ಳಿ ಏತ ನೀರಾವರಿಗೆ ಮೂರನೇ ಒಂದು ಭಾಗದಷ್ಟು ಹಣವನ್ನು ಮಂಜೂರ್ಮಾಡಿದ್ದೀರಿ. ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡಬೇಕೆಂದು ತಾವು ಸೂಚನೆ ಕೊಡುತ್ತೀರಿ. ಇದರ ಬಗ್ಗೆ ಸ್ಪಷ್ಟವಾದಂಥ ಮಾಹಿತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ಇದಕ್ಕೆ ನಾನು ಬಜೆಟ್‌ನಲ್ಲಿ ಮೂರನೇ ಒಂದು ಭಾಗ ಗ್ರಾಂಟ್ ಕೊಟ್ಟಿದ್ದೇನೆ. ಟೆಕ್ನಿಕಲ್ ಮಂಜೂರಾತಿ ಸಿಕ್ಕಿದೆ. ಇನ್ನೊಂದು ವಾರದಲ್ಲಿ ಪ್ರಾರಂಭ ಮಾಡುವುದಕ್ಕೆ ಆದೇಶ ಕೊಡುತ್ತೇನೆ.